ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ: ದೈಶಿ./ವಿ.ಕ್ರೀನಿಧಿ.ಬಿಡುಗಡೆ/43/2018-19 ದಿನಾಂಕ: 14.09.2018

**ಜ್ಞಾಪನ**

**ವಿಷಯ:** 2018-19 ನೇ ಸಾಲಿನ ರಾಜ್ಯ ವಿದ್ಯಾರ್ಥೀ ಕ್ರೀಡಾ ನಿಧಿಯಿಂದ ವಿಭಾಗ ಮತ್ತು ರಾಜ್ಯ ಮಟ್ಟದ ಕ್ರೀಡಾಕೂಟ ಸಂಘಟನೆಯ ಚಟುವಟಿಕೆಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

***********

**ಪ್ರಸ್ತಾವನೆ.**

2018-19ನೇ ಸಾಲಿನಲ್ಲಿ ಸರ್ಕಾರಿ ಮತ್ತು ಅನುದಾನಿತ, ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ 6ನೇ ತರಗತಿಯಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಂದ ಇಲಾಖಾದೇಶದಂತೆ 6 ಮತ್ತು 7ನೇ ತರಗತಿ ವಿದ್ಯಾರ್ಥಿಗಳಿಂದ 5 ರೂಪಾಯಿಗಳಂತೆ ಹಾಗೂ 8 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಂದ 15 ರೂಪಾಯಿಗಳಂತೆ ಸಂಗ್ರಹಿಸುವುದು ಕಡ್ಡಾಯವಾಗಿರುತ್ತದೆ. ಅದರಂತೆ ಜಿಲ್ಲೆಗಳಲ್ಲಿ ಸಂಗ್ರಹವಾಗುವ ವಿದ್ಯಾರ್ಥಿ ಕ್ರೀಡಾ ನಿಧಿ ಹಣದಲ್ಲಿ ಪ್ರಾಥಮಿಕ ವಿಭಾಗದಲ್ಲಿ ಪ್ರತಿ ವಿದ್ಯಾರ್ಥಿಯಿಂದ ರೂ 2 ರಂತೆ ಹಾಗೂ ಪ್ರೌಢ ವಿಭಾಗದಲ್ಲಿ ಪ್ರತಿ ವಿದ್ಯಾರ್ಥಿಯಿಂದ ರೂ 5ರಂತೆ 6 ರಿಂದ 10 ನೇ ತರಗತಿ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ರಾಜ್ಯ ವಿದ್ಯಾರ್ಥಿ ಕ್ರೀಡಾ ನಿಧಿ ಖಾತೆಯ ಹೆಸರಿಗೆ ಆರ್.ಟಿ.ಜಿ.ಎಸ್(RTGS)ಮೂಲಕ ಸೆಪ್ಟಂಬರ್ ತಿಂಗಳ 20ರೊಳಗೆ ಸಂದಾಯ ಮಾಡುವುದು ಕಡ್ಡಾಯವಾಗಿರುತ್ತದೆ.

2018-19ನೇ ಸಾಲಿನಲ್ಲಿ ವಿದ್ಯಾರ್ಥಿ ಕ್ರೀಡಾನಿಧಿಗೆ ಸಂಗ್ರಹವಾಗುವ ಹಣದಿಂದ ಇಲಾಖೆಯು ನಡೆಸುವ ವಿಭಾಗ/ರಾಜ್ಯ ಮಟ್ಟದ ಕ್ರೀಡಾಸ್ಪರ್ಧೆಗಳನ್ನು ನಡೆಸಲು ಈಗಾಗಲೇ ದಿನಾಂಕ:27.06.2018ರಂದು ರಾಜ್ಯ ದೈಹಿಕ ಶಿಕ್ಷಣಾಧಿಕಾರಿಗಳ ಸಭೆಯಲ್ಲಿ ತೀರ್ಮಾನಿಸಿದಂತೆ ವಿಭಾಗ/ರಾಜ್ಯ ಮಟ್ಟದ ಕ್ರೀಡಾ ಚಟುವಟಿಕೆಗಳನ್ನು ಸಂಘಟಿಸಲು ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳಿಗೆ ತಿಳಿಸಲಾಗಿತ್ತು. ಅದರಂತೆ ಸದರಿ ಕ್ರೀಡಾಕೂಟಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳ ಜಿಲ್ಲಾ ವಿದ್ಯಾರ್ಥಿ ಕ್ರೀಡಾನಿಧಿಯ ಜಂಟಿ ಖಾತೆಗೆ ರಾಜ್ಯ ವಿದ್ಯಾರ್ಥಿ ಕ್ರೀಡಾನಿಧಿಯಿಂದ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಆದೇಶ:**

2018-19ನೇ ಸಾಲಿನಲ್ಲಿ ಇಲಾಖೆಯು ನಡೆಸುವ ವಿಭಾಗ/ರಾಜ್ಯ ಮಟ್ಟದ ಕ್ರೀಡಾಕೂಟ ಸಂಘಟನೆಯ ಚಟುವಟಿಕೆಗಳಿಗೆ ಕ್ರೀಡಾಸ್ಪರ್ಧೆಗಳನ್ನು ಅನುಷ್ಠಾನಗೊಳಿಸಲು ರಾಜ್ಯ ವಿದ್ಯಾರ್ಥಿ ಕ್ರೀಡಾನಿಧಿಗೆ ಸಂಗ್ರಹವಾಗುವ ಹಣದಿಂದ ವಿಭಾಗ ಮಟ್ಟಕ್ಕೆ ರೂ: 31,16,000 (ಮೂವತ್ತೊಂದು ಲಕ್ಷ ಹದಿನಾರು ಸಾವಿರ )ಗಳನ್ನು ಮತ್ತು ರಾಜ್ಯ ಮಟ್ಟಕ್ಕೆ ರೂ 20,87,500 (ಇಪ್ಪತ್ತು ಲಕ್ಷ ಎಂಬತ್ತೇಳು ಸಾವಿರದ ಐನೂರು) ಗಳನ್ನು ಒಟ್ಟು ರೂ 52,03,500 ಲಕ್ಷ (ಐವತ್ತೆರಡು ಲಕ್ಷ ಮೂರು ಸಾವಿರದ ಐನೂರು ಮಾತ್ರ)ಗಳನ್ನು ಜಿಲ್ಲಾ ಉಪನಿರ್ದೇಶಕರುಗಳಿಗೆ ಅನುಬಂಧ-1ರಲ್ಲಿ ನೀಡಿರುವ ಅನುದಾನವನ್ನು ಈ ಕೆಳಕಂಡ ಷರತ್ತುಗಳೊಂದಿಗೆ ಆಯಾ ಜಿಲ್ಲೆಗಳ, ಜಿಲ್ಲಾ ವಿದ್ಯಾರ್ಥಿ ಕ್ರೀಡಾ ನಿಧಿಯ ಖಾತೆಗೆ ಆರ್.ಟಿ.ಜಿ.ಎಸ್. (RTGS) ಮೂಲಕ ಬಿಡುಗಡೆ ಮಾಡಲಾಗಿದೆ. ಜಿಲ್ಲಾ ವಿದ್ಯಾರ್ಥಿ ಕ್ರೀಡಾ ನಿಧಿಯ ಖಾತೆಗೆ ಜಮೆಯಾದ ಬಗ್ಗೆ ಈ ಕಛೇರಿಗೆ ಮಾಹಿತಿ ನೀಡಿ, ಕ್ರೀಡಾ ಸ್ಪರ್ಧೆಗಳನ್ನು ನಿಗದಿತ ಸಮಯದಲ್ಲಿ ನಡೆಸಲು ಕ್ರಮಕೈಗೊಳುವುದು.

ಷರತ್ತುಗಳು

1. 2018-19ನೇ ಸಾಲಿನಲ್ಲಿ ವಿವಿಧ ಹಂತಗಳಲ್ಲಿ ಕ್ರೀಡಾಸ್ಪರ್ಧೆಗಳನ್ನು ಆಯೋಜಿಸುವ ಬಗ್ಗೆ ಪ್ರಕಟಿಸಿರುವ ಕ್ರೀಡಾ ವೇಳಾಪಟ್ಟಿಯಂತೆ ಅನುಗುಣವಾಗಿ ಕ್ರೀಡಾಕೂಟಗಳನ್ನು ಆಯೋಜನೆ ಮಾಡುವುದು.
2. ಎಲ್ಲಾ ಹಂತಗಳಲ್ಲೂ ಆಯ್ಕೆ ಸಮಿತಿಗಳನ್ನು ರಚಿಸಿಕೊಂಡು ವಿಜೇತರಾದವರ ಆಯ್ಕೆ ಪ್ರಕ್ರಿಯೆಯನ್ನು ಇಲಾಖಾ ನಿಯಮಗಳನ್ವಯ ಪಾರದರ್ಶಕವಾಗಿ ಮಾಡುವುದು.
3. ಹೆಚ್ಚು ಪ್ರಚಲಿತವಿರುವ ಕ್ರೀಡೆಗಳಿಗೆ ಪ್ರಾಧಾನ್ಯತೆ ನೀಡುವುದು ಹಾಗೂ ವಿಭಾಗ ಮಟ್ಟದಲ್ಲಿ ಆಯ್ಕೆಯಾಗಿರುವ ಎಲ್ಲಾ ಮಕ್ಕಳು ರಾಜ್ಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಅವಕಾಶ ನೀಡುವುದು.
4. ಬಿಡುಗಡೆ ಮಾಡಿರುವ ಅನುದಾನವನ್ನು ನಿಗದಿತ ಕ್ರೀಡಾ ಚಟುವಟಿಕೆಗಳಿಗೆ ಮಾತ್ರ ಬಳಸುವುದು.
5. ಪ್ರತಿ ಹಂತಗಳಲ್ಲೂ ಖರ್ಚು/ವೆಚ್ಚಗಳ ಬಗ್ಗೆ ಸೂಕ್ತ ದಾಖಲೆಗಳನ್ನು ನಿರ್ವಹಿಸುವುದು.
6. ವಿಭಾಗ ಮತ್ತು ರಾಜ್ಯ ಮಟ್ಟದ ಕ್ರೀಡಾ ಚಟುವಟಿಕೆಗಳನ್ನು ಆಯೋಜಿಸುವ ಸಂಬಂಧ ವಿಭಾಗ ಮತ್ತು ರಾಜ್ಯ ಹಂತಗಳಲ್ಲಿ ಅನುಷ್ಠಾನ ಸಮಿತಿಗಳನ್ನು ರಚಿಸಿಕೊಳ್ಳುವುದು.
7. ವಿಭಾಗ ಮತ್ತು ರಾಜ್ಯ ಮಟ್ಟದ ಕ್ರೀಡಾಕೂಟಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ನೀಡುವ ಕುರಿತಂತೆ ದಿನಾಂಕ: 31.08.2018ರಂದು ಈ ಕಛೇರಿಯಿಂದ ಹೊರಡಿಸಿರುವ ಸುತ್ತೋಲೆ ಪ್ರಕಾರ ಕ್ರಮ ಕೈಗೊಳ್ಳುವುದು.

ನಿರ್ದೇಶಕರು
ಪ್ರೌಢ ಶಿಕ್ಷಣ

ಇವರಿಗೆ,

1. ಸಂಬಂಧಿಸಿದ ಉಪನಿರ್ದೇಶಕರು (ಆಡಳಿತ) ಇವರುಗಳಿಗೆ ಕಳುಹಿಸುತ್ತಾ ಬಿಡುಗಡೆ ಮಾಡಿರುವ ಅನುದಾನವನ್ನು ತಕ್ಷಣ ಸೆಳೆಯಲು ತುರ್ತು ಕ್ರಮ ಕೈಗೊಳ್ಳುವಂತೆ ತಿಳಿಸಿದೆ.
2. ಸಂಬಂಧಿಸಿದ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳಿಗೆ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ
3. ನಿರ್ದೇಶಕರು ಪ್ರೌಢ ಶಿಕ್ಷಣ ಆಪ್ತ ಶಾಖೆಗೆ ಮಾಹಿತಿಗಾಗಿ.
4. ಕಛೇರಿ ಪ್ರತಿ

# ಅನುಬಂಧ-01

**2018-19ನೇ ಸಾಲಿನ ವಿಭಾಗಮಟ್ಟ ಮತ್ತು ರಾಜ್ಯಮಟ್ಟದ ಕ್ರೀಡಾಸ್ಪರ್ಧೆಗಳನ್ನು ಸಂಘಟನೆ ಮಾಡಲು ರಾಜ್ಯ ವಿದ್ಯಾರ್ಥಿ ಕ್ಷೇಮನಿಧಿಯಿಂದ ಜಿಲ್ಲಾ ಉಪ ನಿರ್ದೇಶಕರು(ಆಡಳಿತ) ಮತ್ತು ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳ ಜಂಟಿ ಖಾತೆಗೆ ಬಿಡುಗಡೆ ಮಾಡಿರುವ ಅನುದಾನ**

**ಬೆಂಗಳೂರು ವಿಭಾಗ**

| ಕ್ರಸಂ | ಜಿಲ್ಲೆಗಳ ಹೆಸರು | ವಿಭಾಗ ಮಟ್ಟದ ಸಂಘಟನೆಯ ಕ್ರೀಡೆಯ ಹೆಸರು | ವಿಭಾಗ ಮಟ್ಟದ ಸಂಘಟನೆ | ರಾಜ್ಯಮಟ್ಟದ ಸಂಘಟನೆಯ ಕ್ರೀಡೆ ಹೆಸರು | ರಾಜ್ಯಮಟ್ಟದ ಸಂಘಟನಾ ವೆಚ್ಚ | ಒಟ್ಟೂ ಮೊತ್ತ | ಷರಾ |
|---|---|---|---|---|---|---|---|
| 1 | ಬೆಂಗಳೂರು ಉತ್ತರ | ಹಾಕಿ | 75000 | ಸ್ಕೇಟಿಂಗ್, | 75000 | 1,50,000 | |
| 2 | ಬೆಂಗಳೂರು ದಕ್ಷಿಣ | ಬ್ಯಾಸ್ಕೆಟ್‌ಬಾಲ್ ಮತ್ತು ಥ್ರೋ-ಬಾಲ್ | 75000<br>65000 | ಈಜು ಡೈವಿಂಗ್ | 1,10,000 | 2,50,000 | |
| 3 | ಬೆಂಗಳೂರು ಗ್ರಾ | ಖೋ-ಖೋ<br>ಯೋಗಾಸನ<br>ಹ್ಯಾಂಡ್ ಬಾಲ್ | 65000<br>65000<br>65000 | ಯೋಗಾಸನ | 60,000 | 2,55,000 | |
| 4 | ಕೋಲಾರ | ಫುಟ್ ಬಾಲ್ | 56500 | ಜೂಡೋ | 60000 | 1,16,500 | |
| 5 | ತುಮಕೂರು | ಕ್ರಿಕೇಟ್ | 75000 | 14 ವರ್ಷ ಅಥ್ಲಟಿಕ್ಸ್ | 1,40,000 | 2,15,000 | |
| 6 | ಮಧುಗಿರಿ | ಬಾಲ್ ಬ್ಯಾಡ್ಮಿಂಟನ್ | 32500 | ಚೆಸ್ | 1,10,000 | 1,42,500 | |
| 7 | ಚಿತ್ರದುರ್ಗ | ಕಬ್ಬಡಿ | 65000 | ------ | | 65000 | |
| 8 | ಶಿವಮೊಗ್ಗ | ವಾಲಿ ಬಾಲ್ | 65000 | ವಾಲಿ ಬಾಲ್ | 60,000 | 1,25,000 | |
| 9 | ದಾವಣಗೆರೆ | ಷಟಲ್ ಬ್ಯಾಡ್ಮಿಂಟನ್ | 75000 | ಖೋ-ಖೋ (17) | 30,000 | 1,05,000 | |
| 10 | ರಾಮನಗರ | ----- | --- | ಕುಸ್ತಿ | 90,000 | 90,000 | |
| 11 | ಚಿಕ್ಕಬಳ್ಳಾಪುರ | ——— | ----- | ಥ್ರೋ-ಬಾಲ್ | 60,000 | 60,000 | |
| | ಒಟ್ಟೂ | | **7,79,000** | | **7,95,000** | **15,74,000** | |

ಮೈಸೂರು ವಿಭಾಗ

| ಕ್ರಸಂ | ಜಿಲ್ಲೆಗಳ ಹೆಸರು | ವಿಭಾಗ ಮಟ್ಟದ ಸಂಘಟನೆಯ ಕ್ರೀಡೆಯ ಹೆಸರು | ವಿಭಾಗ ಮಟ್ಟದ ಸಂಘಟನೆ | ರಾಜ್ಯಮಟ್ಟದ ಸಂಘಟನೆಯ ಕ್ರೀಡೆ ಹೆಸರು | ರಾಜ್ಯಮಟ್ಟದ ಸಂಘಟನಾ ವೆಚ್ಚ | ಒಟ್ಟೂ ಮೊತ್ತ | ಷರಾ |
|---|---|---|---|---|---|---|---|
| 12 | ಮೈಸೂರು | ಕ್ರಿಕೆಟ್ ಮತ್ತು ಷಟಲ್ ಬ್ಯಾಡ್ಮಿಂಟಲ್ | 75000<br>75000 | ಷಟಲ್ ಬ್ಯಾಡ್ಮಿಂಟನ್ ಕ್ರಿಕೆಟ್ | 90000<br>70000 | 3,10,000 | |
| 13 | ಚಾಮರಾಜನಗರ | ಬಾಲ್ ಬ್ಯಾಡ್ಮಿಂಟನ್ | 32500 | --- | – | 32,500 | |
| 14 | ಮಂಡ್ಯ | ಖೋ-ಖೋ | 65000 | (17) ಅಥ್ಲಟಿಕ್ಸ್ | 1,75,000 | 2,40,000 | |
| 15 | ಹಾಸನ | ಥ್ರೋ ಬಾಲ್ | 65000 | ಹಾಕಿ | 70,000 | 1,35,000 | |
| 16 | ಚಿಕ್ಕಮಗಳೂರು | ವಾಲಿ ಬಾಲ್<br>ಹ್ಯಾಂಡ್ ಬಾಲ್ | 65000<br>65000 | --- | – | 1,30,000 | |
| 17 | ದಕ್ಷಿಣ ಕನ್ನಡ | ಬ್ಯಾಸ್ಕೆಟ್ ಬಾಲ್,<br>ಫುಟ್ ಬಾಲ್<br>ಕಬ್ಬಡಿ | 75000<br>56500<br>65000 | ನೆಟ್-ಬಾಲ್,<br>ಬಾಲ್ ಬ್ಯಾಡ್ಮಿಂಟನ್<br>ಫುಟ್ ಬಾಲ್ | 60,000<br>30,000<br>52500 | 3,39,000 | |
| 18 | ಕೊಡಗು | ಹಾಕಿ | 75000 | ---- | | 75,000 | |
| 19 | ಉಡುಪಿ | ಯೋಗಾಸನ | 65000 | ಟೇಬಲ್ ಟೆನ್ನಿಸ್ | 1,10,000 | 1,75,000 | |
| | ಒಟ್ಟೂ | | **7,79,000** | | **6,57,500** | **14,36,500** | |

## ಬೆಳಗಾವಿ ವಿಭಾಗ

| ಕ್ರಸಂ | ಜಿಲ್ಲೆಗಳ ಹೆಸರು | ವಿಭಾಗ ಮಟ್ಟದ ಸಂಘಟನೆಯ ಕ್ರೀಡೆಯ ಹೆಸರು | ವಿಭಾಗ ಮಟ್ಟದ ಸಂಘಟನೆ | ರಾಜ್ಯಮಟ್ಟದ ಸಂಘಟನೆಯ ಕ್ರೀಡೆ ಹೆಸರು | ರಾಜ್ಯಮಟ್ಟದ ಸಂಘಟನಾ ವೆಚ್ಚ | ಒಟ್ಟೂ ಮೊತ್ತ | ಷರಾ |
|---|---|---|---|---|---|---|---|
| 20 | ಚಿಕ್ಕೋಡಿ | ಖೋ-ಖೋ | 65000 | ಖೋ-ಖೋ (14) | 30,000 | 95,000 | |
| 21 | ಬೆಳಗಾವಿ | ಹಾಕಿ | 75000 | ----- | – | 75,000 | |
| 22 | ವಿಜಯಪುರ | ಫುಟ್ ಬಾಲ್<br>ಬ್ಯಾಸ್ಕೆಟ್ ಬಾಲ್ | 56500<br>75000 | ಬ್ಯಾಸ್ಕೆಟ್ ಬಾಲ್ | 70000 | 2,01,500 | |
| 23 | ಬಾಗಲಕೋಟೆ | ಕಬ್ಬಡಿ<br>ಹ್ಯಾಂಡ್ ಬಾಲ್ | 65000<br>65000 | ಹ್ಯಾಂಡ್ ಬಾಲ್ | 60000 | 1,90,000 | |
| 24 | ಧಾರವಾಡ | ಯೋಗಾಸನ<br>ಕ್ರಿಕೇಟ್ | 65000<br>75000 | ಕಬ್ಬಡಿ<br>ಜಿಮ್ನಾಸ್ಟಿಕ್ | 60000<br>60000 | 2,60,000 | |
| 25 | ಗದಗ | ಬಾಲ್‌ಬ್ಯಾಡ್ಮಿಂಟನ್ | 32500 | ಕರಾಟೆ | 60000 | 92,500 | |
| 26 | ಹಾವೇರಿ | ವಾಲಿ ಬಾಲ್ | 65000 | ---- | – | 65,000 | |
| 27 | ಉತ್ತರಕನ್ನಡ | ಥ್ರೋ-ಬಾಲ್ | 65000 | --- | – | 65,000 | |
| 28 | ಸಿರ್ಸಿ ಶೈಕ್ಷಣಿಕ ಜಿಲ್ಲೆ | ಷಟಲ್ ಬ್ಯಾಡ್ಮಿಂಟನ್ | 75000 | ವಿಕಲಚೇತನ ಕ್ರೀಡಾಕೂಟ | 2,25,000 | 3,00,000 | |
| | **ಒಟ್ಟೂ** | | **7,79,000** | | **5,65,000** | **13,44,000** | |

## ಕಲಬುರಗಿ ವಿಭಾಗ

| ಕ್ರಸಂ | ಜಿಲ್ಲೆಗಳ ಹೆಸರು | ವಿಭಾಗ ಮಟ್ಟದ ಸಂಘಟನೆಯ ಕ್ರೀಡೆಯ ಹೆಸರು | ವಿಭಾಗ ಮಟ್ಟದ ಸಂಘಟನೆ | ರಾಜ್ಯಮಟ್ಟದ ಸಂಘಟನೆಯ ಕ್ರೀಡೆ ಹೆಸರು | ರಾಜ್ಯಮಟ್ಟದ ಸಂಘಟನಾ ವೆಚ್ಚ | ಒಟ್ಟೂ ಮೊತ್ತ | ಷರಾ |
|---|---|---|---|---|---|---|---|
| 29 | ಯಾದಗಿರಿ | ಕಬ್ಬಡಿ<br>ವಾಲಿಬಾಲ್ | 65000<br>65000 | --- | – | 1,30,000 | |
| 30 | ರಾಯಚೂರು | ಕ್ರಿಕೇಟ್ | 75000 | --- | -- | 75000 | |
| 31 | ಕೊಪ್ಪಳ | ಬಾಲ್‌ಬ್ಯಾಡ್ಮಿಂಟನ್ | 32,500 | --- | | 32,500 | |
| 32 | ಕಲಬುರಗಿ | ಹ್ಯಾಂಡ್‌ಬಾಲ್<br>ಥ್ರೋ-ಬಾಲ್ | 65000<br>65000 | ಲಾನ್‌ಟೆನಿಸ್ | 70,000 | 2,00,000 | |
| 33 | ಬೀದರ್ | ಯೋಗಾಸನ<br>ಷಟಲ್ ಬ್ಯಾಡ್ಮಿಂಟನ್ | 65000<br>75000 | --- | – | 1,40,000 | |
| 34 | ಬಳ್ಳಾರಿ | ಖೋ-ಖೋ,<br>ಹಾಕಿ,<br>ಬಾಸ್ಕೆಟ್ ಬಾಲ್<br>ಫುಟ್ ಬಾಲ್ | 65000<br>75000<br>75000<br>56,500 | ---- | – | 2,71,500 | |
| | **ಒಟ್ಟೂ** | | **7,79,000** | | **70,000** | **8,49,000** | |
| | **ಒಟ್ಟು ವಿಭಾಗ ಮಟ್ಟ** | | **31,16,000** | **ಒಟ್ಟು ರಾಜ್ಯ ಮಟ್ಟ** | **20,87,500** | **52,03,500** | |